ಮಲ್ಲಿಕಾರ್ಜುನ, ಸುರಧೇನುಪುರ
ಹೆಣ್ಣು ಆಕರ್ಷಣೆ, ಹೆಂಡತಿ ಘರ್ಷಣೆ. ಏನಿದರ ಮರ್ಮ?



ಗಂಡು ರಕ್ಷಕ; ಪತಿ ಗಂಡ (ಅಪಾಯ) ಆಗುವುದೇ ಕಾರಣ.

ವಿ. ಹೇಮಂತಕುಮಾರ್, ಬೆಂಗಳೂರು
ಹಗಲಿನಲ್ಲಿ ನೀನು ಅನ್ನುತ್ತಾಳೆ. ರಾತ್ರಿಯಲ್ಲಿ ನೀವು ಅನ್ನುತ್ತಾಳೆ. ಏಕೆ ಸರ್?
ರಾತ್ರಿಯಲ್ಲೇ ನೋವುಗಳು ಹೆಚ್ಚಾಗುವುದು. ನೀವಿಬಿಡಿ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ಸತ್ತವರ ಮುಂದೆ ಹಲಗೆ, ತಮಟೆ ಬಾರಿಸುವುದೇಕೆ?
ಅದು ಸತ್ತವನ ಮನೆಯನ್ನು ಸ್ಪಷ್ಟವಾಗಿ ಸೂಚಿಸುವ ಆಡಿಯೊ ಜಿಪಿಎಸ್.

ಬೂಕನಕೆರೆ ವಿಜೇಂದ್ರ, ಮೈಸೂರು
ಬುದ್ಧಿವಂತ ಹುಡುಗಿಯರೇಕೆ ಒಬ್ಬಂಟಿಯಾಗಿರುತ್ತಾರೆ?



ದಡ್ಡಿಯರೆಲ್ಲ ಹುಡುಗರ ಬುಟ್ಟಿಗೆ ಬಿದ್ದುಬಿಟ್ಟಿರುವುದರಿಂದ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ನೆನಪಿನ ತೇರನ್ನು ಎಳೆಯುವವರು ಯಾರು?
'ಹೋದ ತಿಂಗಳು ನಿಮ್ಮಮ್ಮ ಏನಂದ್ರು?' ಎಂದು ಸವಾಲೆಸೆಯುವ ಸತಿಯೇ.

ಮಂಡಿ ಕುಮಾರ್, ಬೆಂಗಳೂರು
ನಾವು ನಂಬಿರುವ ದೇವರು ಮನರಂಜನೆಗೆ ಏನು ಮಾಡುತ್ತಾರೆ ರಾಮ್?
ಸತ್ಯಹರಿಶ್ಚಂದ್ರನ ಗುಣವನ್ನು ಪರೀಕ್ಷಿಸಿದಂತೆಯೇ ಮನುಷ್ಯಗುಣದ ಮೇಲೆ ಬೆಟ್ಟಿಂಗ್ ಕಟ್ಟುತ್ತಾರೆ.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ
ನಿಮ್ಮನ್ನು ಮುಖ್ಯಮಂತ್ರಿಯಾಗಿ ನೇಮಿಸಿದರೆ ನೀವು ಮಾಡುವ ಮೊದಲ ಕೆಲಸ ಯಾವುದು?
ಕಾನ್ಫರೆನ್ಸ್ ಕಾಲ್ ಮೂಲಕ ಸೆಷನ್ಸ್ ನಡೆಸಿ ಟ್ರಾಫಿಕ್, ಪೊಲ್ಯೂಷನ್ ತಗ್ಗಿಸುವುದು.

ವಿಜಯ್‌ಕುಮಾರ್ ಎಚ್.ಕೆ. ರಾಯಚೂರು
ಮನಸ್ಸಿಗಿಲ್ಲದ ಮಡಿವಂತಿಕೆ ದೇಹಕ್ಕೇಕೆ?
ಮಡಿ ಅವಶ್ಯವೆಂದು ಪುಲಕೇಶಿಗಳ ಹೆಸರೇ ಸೂಚಿಸುತ್ತದೆ – ಇಮ್ಮಡಿ, ಮುಮ್ಮಡಿ!

ಜಗದೀಶ ಬಿ. ಹೊಸೂರು, ಮೈಸೂರು
ಪತಿ ಪತ್ನಿಗೆ, ಪತ್ನಿ ಪತಿಗೆ ಅವರವರ ಇಷ್ಟದಂತೆ ಬದುಕಲು ಅವಕಾಶ ಮಾಡಿಕೊಟ್ಟರೆ ಹೇಗಿರುತ್ತದೆ?
ಲಿವಿಂಗ್ ಟುಗೆದರ್ ಸೆಪರೇಟ್‌ಲಿ ಎಂಬ ಹೊಸ ವಿಧ ಜಾರಿಗೆ ಬರುತ್ತದೆ.

ಹೆಚ್. ಲಕ್ಷ್ಮೀನಾರಾಯಣ, ಉಜಿರೆ
ತಾವು ಸರ್ವಜ್ಞರೆನ್ನುತ್ತಾ ಅನ್ಯರ ಪ್ರತಿ ಕ್ರಿಯೆಯಲ್ಲೂ ತಪ್ಪು ಹುಡುಕುವರು ವಾಸ್ತವ ಜಗತ್ತನ್ನರಿವುದೆಂದು?
ವಾಸ್ತವಕ್ಕೆ ಹಾತೊರೆಯುವವರು ಎಂದಿಗೂ ವಾಸ್ತವಕ್ಕೆ ದೂರ.

ಜಯಶ್ರೀ, ಬೆಂಗಳೂರು
ಬದುಕುವುದಕ್ಕೆ ತಿನ್ನಬೇಕೋ, ತಿನ್ನುವುದಕ್ಕೆ ಬದುಕಬೇಕೋ?
ಅದು ಅವರವರ ಮನೆಯವರ ಕೈರುಚಿಯ ಮೇಲೆ ಡಿಪೆಂಡ್ ಆಗುತ್ತದೆ.

ಸಿಹಿಮೊಗೆ ರಮೇಶ್, ಮೈಸೂರು
ಕಾಲಿಗೆ ಬಿದ್ದವರನ್ನು ಲೆಕ್ಕಿಸದೆ ಮುನ್ನಡೆಯುವ ಮುಖಂಡರು ಚುನಾವಣಾಸಮಯದಲ್ಲಿ ಕಾಲಿಗೆ ಬೀಳುವರಲ್ಲ?
ನಿತ್ಯ ಗಗನದತ್ತ ಕಣ್ಣು, ಬೇಟೆಯಾಡುವಾಗ ಪ್ರಾಣಿಯ ಬುಡಕ್ಕೆ ಇಳಿಯುವುದು ಹದ್ದಿನ ಪ್ರಮುಖ ಗುಣ.

ಪಿ. ಜಯವಂತ ಪೈ, ಕುಂದಾಪುರ
ಖಾದಿ ತೊಟ್ಟವರಿಗೂ, ಖಾಕಿ ತೊಟ್ಟವರಿಗೂ ವ್ಯತ್ಯಾಸವೇನು?
ಅವರದು ಗ್ರಾಮೋದ್ಯೋಗಕ್ಕೆ ಲಾಭ; ಇವರದು ಸಂಗ್ರಾಮೋದ್ಯೋಗಕ್ಕೆ ಲಾಭ.

## ವಾರದ ಪ್ರಶ್ನೆ

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಷೇರು ಮಾರುಕಟ್ಟೆ, ಕೃಷಿ ಮಾರುಕಟ್ಟೆಗಳಂತೆ ಶಾಸಕರ ಮಾರುಕಟ್ಟೆ ಇದ್ದಿದ್ದರೆ ಚೆನ್ನಿತ್ತಲ್ಲವೆ?
ಇದೆಯಲ್ಲ – ಅದನ್ನು ಭಿನ್ನಮತೀಯರ ರೆಸಾರ್ಟ್ ಎಂದು ಕರೆಯುತ್ತಾರೆ.

ಅನಸೂಯ ಟಿ. ಕೇದಿಗೆಮನೆ
ತಲೆಯಲ್ಲಿ ಹುಳ ಬಿಡುವುದು ಎಂದರೇನು?
ಬುದ್ಧಿಯ ವೆಹಿಕಲ್‌ನಲ್ಲಿ ವಿಷಯವೆಂಬ ಪ್ಯಾಸೆಂಜರನ್ನು ಕೂಡಿಸಿಕೊಂಡು ಓಡಿಸುವುದು.

ರತ್ನಜ, ಮೈಸೂರು
ವೈಕುಂಠ ಸಮಾರಾಧನೆಗೂ, ಕೈಲಾಸ ಗಣಾರಾಧನೆಗೂ ಏನು ವ್ಯತ್ಯಾಸ?
ಗಣಾರಾಧನೆಯಲ್ಲಿ ಬೆಳ್ಳುಳ್ಳಿ ಕಡ್ಡಾಯ.

ಬಿ.ಆರ್. ಉಷಾ, ಕೆನಡಾ
ವಿಮಾನ ಪ್ರಯಾಣಕ್ಕೂ, ರೈಲು ಪ್ರಯಾಣಕ್ಕೂ ಇರುವ ವ್ಯತ್ಯಾಸವೇನು?



ವಿಮಾನ ಪ್ರಯಾಣ ಮಾಡುವವರು ಹೆಚ್ಚು ರೈಲು ಬಿಡುತ್ತಾರೆ; ರೈಲುಪ್ರಯಾಣಿಕರು ಹೆಚ್ಚು ಹಾರಾಡುತ್ತಾರೆ.

ಪೂರ್ಣಿಮಾ ಮೂರ್ತಿ, ಬೆಂಗಳೂರು
ಕನ್ನಡದಲ್ಲಿಯೇ ಚೆಂದದ ಹೆಸರುಗಳಿರುವಾಗ ಕನ್ನಡ ಚಿತ್ರಗಳಿಗೆ ಇಂಗ್ಲಿಷ್ ಹೆಸರಿಡುವುದೇಕೆ?
'ಸುಂದರಿ ಸುಮಧುರೆ ಶಿಕ್ಷಿತೆ ಸಂಪನ್ನೆ ಎಂದರೆ ಅವಳೇ ಪರಪತ್ನಿ' ಅಂತೆ. ಇದೂ ಹಾಗೆಯೇ.

ಕೆ.ಸಿ. ಸತ್ಯನಾರಾಯಣ, ದೊಡ್ಡಬಳ್ಳಾಪುರ
ಉತ್ತರಭೂಪರಿಂದ ಶುರುವಾದ ಸಾಹಿತ್ಯಪಯಣ ರಾಮ್‌ರ ನಂತರ ಹೇಗೆ ಸಾಗಬಹುದು?
ಭವ್ಯವಾಗಿ. ಭವಿಷ್ಯದ ಕೋಟೆ ಎಂದಿಗೂ ಇಂದಿಗಿಂತ ಭದ್ರವೇ.

■ ರಾಮ್